ಆದರೆ ಹುಕ್ಕೇರಿ ತಾಲ್ಲೂಕು ವಿದ್ಯುತ್ ಸಹಕಾರ ಸಂಘವು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ವಿದ್ಯುತ್ ಬಳಕೆಯ ಬಗ್ಗೆ ಹೆಚ್ಚಿನ ಪ್ರಮಾಣದ ಬಾಕಿಯನ್ನು ನೀಡಬೇಕಾಗಿರುವುದರಿಂದ ಹುಕ್ಕೇರಿ ತಾಲ್ಲೂಕಿನಲ್ಲಿ ವಿದ್ಯುತ್ ಸರಬರಾಜಿನ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿ ಉಂಟಾಗಿದೆ.

ದೇಲಂಪಚಿಟ್ಟು ಸೇತುವೆ ನಿರ್ಮಾಣ ಕುರಿತು

576-ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಗಳಪೇಟೆ-ಕನ್ನಿಗೋಳಿ-ತಾಳಿಪಾಡಿ ರಸ್ತೆಯಲ್ಲಿ ದೇಲಂತಬೆಟ್ಟು ಸೇತುವೆ ಈತನಕ ಆಗಿದೆ ಜನರಿಗೆ ಆಗುತ್ತಿರುವ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಆ ಸೇತುವೆಯನ್ನು ಯಾವಾಗ. ನಿರ್ಮಿಸಲಾಗುವುದು?

ಇ) ಆ ಸೇತುವೆಗೆ ಎಷ್ಟು ಖರ್ಚು ತಗಲಬಹುದು?

ಈ) ಆ ಸೇತುವೆಯು ಬಹಳ ಅವಶ್ಯಕತೆಯಿರುವ ಬಗ್ಗೆ ಸರ್ಕಾರ ಶೀಘ್ರ ರಚನೆಗೆ ಏನು ಕ್ರಮ ಕೈಗೊಳ್ಳುವುದು?

ಶ್ರೀ ಕೆ.ಪಿಜಿ. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಬಂದಿದೆ.

ಆ) 1994-95ರ ಸಾಲಿನ ಹೊಸ ಕಾಮಗಾರಿಗಳ ಆಯವ್ಯಯ ಪಟ್ಟಿಯಲ್ಲಿ ಸೇರಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಈ ಸೇತುವೆ ಕಾಮಗಾರಿಗೆ ರೂ. 75.00 ಲಕ್ಷಗಳ ಅಂದಾಜು ವೆಚ್ಚ ಆಗಬಹುದೆಂದು ಅಂದಾಜಿಸಲಾಗಿದೆ.

ಈ) ಈ ಸೇತುವೆ ಕಾಮಗಾರಿಯು ಮೊದಲು ಜಿಲ್ಲಾ ಪರಿಷತ್ ವ್ಯಾಪ್ತಿಯಲ್ಲಿದ್ದು, ದಿನಾಂಕ 6-5-92ರಲ್ಲಿ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸಲ್ಪಟ್ಟಿದ್ದು, ಅಂದಿನಿಂದ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಗೆ ತೆಗೆದುಕೊಳ್ಳಲಾಗಿದೆ. 94-95ನೇ ಸಾಲಿನ ಆಯವ್ಯಯದಲ್ಲಿ ಸೇರಿಸಲು ಪರಿಶೀಲಿಸಲಾಗುವುದು.

ಜಂಗರ ಗುಂಡಿಯ ವಿತ ನೀರಾವರಿ ಯೋಜನೆ ಕುರಿತು

577 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಂಗರ ಗುಂಡಿಯ ವಿತ ನೀರಾವರಿ ಯೋಜನೆಗೆ ಅಂದಾಜು ಪಟ್ಟಿಯಂತೆ ಎಷ್ಟು ಖರ್ಚು ತಗಲುವುದು?

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೃಹತ್ ನೀರಾವರಿಗೆ ಅನುಕೂಲವಿದ್ದು ಅಂತಹ ವಿತ ನೀರಾವರಿಯನ್ನು ಕೈಗೊಳ್ಳುವಾಗ ಸರ್ಕಾರ ಬಹಳ ತಡೆ ಹಾಕಲು ಕಾರಣವೇನು?

ಇ) ಈ ಬಾರಿಯ ಮುಂಗಡ ಪತ್ರದಲ್ಲಿ ಹಣ ಒದಗಿಸಲಾಗಿದ್ದರೂ ಆ ಕೆಲಸ ಕಾರ್ಯಗತವಾಗದ ಬಗ್ಗೆ ಜನರು ಬಹಳ ಬೇಸರಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಸರ್ಕಾರ ಆ ಕೆಲಸವನ್ನು ಯಾವಾಗ ಪೂರ್ತಿಗೊಳಿಸುವುದು?

ಡಾ॥ ಆರ್.ಬಿ. ಚೌಧರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಸುಮಾರು 29.10 ಲಕ್ಷ ರೂ.ಗಳು

ಆ) ಈ ಯೋಜನೆಯನ್ನು ವಿತ ನೀರಾವರಿ ನಿಗಮದಿಂದ 3:93ರ ನಂತರ ಸಣ್ಣ ನೀರಾವರಿ ಇಲಾಖೆಗೆ ಹಸ್ತಾಂತರಿಸಲಾಗಿದ್ದು ನಂತರ ಅಂದಾಜು ಪಟ್ಟಿ ತಯಾರಿಸಿರುವುದರಿಂದ ಹಾಗೂ ಈ ಯೋಜನೆಗೆ 1993-94ನೇ ಸಾಲಿನಲ್ಲಿ ಸಾಕಷ್ಟು ಅನುದಾನವಿಲ್ಲದಿದ್ದ ಕಾರಣ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ತಡವಾಗಿದೆ.

ಇ) ಬಂದಿದೆ

ಈ) ಅಂದಾಜಿಗೆ ಅನುಮೋದನೆ ನೀಡಿದ ನಂತರ ಅನುದಾನದ ಲಭ್ಯತೆಯ ಮೇಲೆ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು.

ಹುಕ್ಕೇರಿ ತಾಲ್ಲೂಕಿನ ಇಲೆಕ್ಟ್ರಿಕ್ ಸೊಸಾಯಿಟಿಯು ವಿದ್ಯುತ್ ವಿತರಣಾ ಕೇಂದ್ರಕ್ಕೆ ಅರ್ಜಿ ಸಲ್ಲಿಸಿರುವ ಬಗ್ಗೆ

487 - ಶ್ರೀ ಉಮೇಶ್ ವಿ. ಕತ್ತಿ (ಹುಕ್ಕೇರಿ): ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ತಾಲ್ಲೂಕಿನ ಇಲೆಕ್ಟ್ರಿಕ್ ಸೊಸಾಯಿಟಿ ಎಷ್ಟು ವಿದ್ಯುತ್ ವಿತರಣಾ ಕೇಂದ್ರ ಬೇಡಿ ಅರ್ಜಿ ಸಲ್ಲಿಸಿದೆ?

ಆ) ಸಲ್ಲಿಸಿದಲ್ಲಿ ಅವು ಯಾವ ಯಾವುವು ಮತ್ತು ಯಾವಾಗ ಅರ್ಜಿ ಸಲ್ಲಿಸಲಾಗಿದೆ?

ಇ) ಅಲ್ಲಿ ವಿತರಣಾ ಕೇಂದ್ರ ಮಂಜೂರಾತಿ ಕೊಡದೇ ಇರುವ ಕಾರಣವೇನು?

ಈ) ಅಲ್ಲಿ ವಿತರಣಾ ಕೇಂದ್ರಗಳಲ್ಲದೇ ರೈತರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಬಂದಿದ್ದಲ್ಲಿ ಮಂಜೂರಾತಿ ಕೊಟ್ಟು ಸರಿಪಡಿಸಲಾಗುವುದೇ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು):

ಅ) ಮೂರು ವಿದ್ಯುತ್ ಉಪಕೇಂದ್ರಗಳನ್ನು ಬೇಡಿ ಅರ್ಜಿ ಸಲ್ಲಿಸಿದೆ

ಆ) ಅವು ಯಾವುವೆಂದರೆ ಹಿರಕಲ ಗ್ರಾಮದಲ್ಲಿ 110:11 ಕೆ.ವಿ. ವಿದ್ಯುತ್ ಉಪಕೇಂದ್ರ ಕಣಗಲ್ ಮತ್ತು ಗುಡಾಸ್ ಗ್ರಾಮಗಳಲ್ಲಿ ತಲಾ 33:11 ಕೆ.ವಿ. ವಿದ್ಯುತ್ ಉಪಕೇಂದ್ರಗಳು ಈ ವಿದ್ಯುತ್ ಉಪಕೇಂದ್ರಗಳ ನಿರ್ಮಾಣಕ್ಕೆ ಮನವಿಯನ್ನು ಹುಕ್ಕೇರಿ ತಾಲ್ಲೂಕು ಗ್ರಾಮೀಣ ವಿದ್ಯುತ್ ಸಹಕಾರ ಸಂಘವು ಡಿಸೆಂಬರ್ 92ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಸಲ್ಲಿಸಿದೆ.

ಇ) ಪ್ರಸ್ತಾವನೆಗಳು ಮಂಡಳಿಯ ಪರಿಶೀಲನೆಯಲ್ಲಿವೆ. ಅವರೆ ಸದರೀ ಹುಕ್ಕೇರಿ ತಾಲ್ಲೂಕು ಗ್ರಾಮೀಣ ವಿದ್ಯುತ್ ಸಹಕಾರ ಸಂಘವು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಗೆ ಸುಮಾರು 1ಕೋಟಿ ರೂ.ಗಳ ಬೃಹತ್ ಪ್ರಮಾಣದ ಬಾಕಿಯನ್ನು ನೀಡಬೇಕಾಗಿರುವುದರಿಂದ, ಆರ್ಥಿಕ ಮುಗ್ಗಟ್ಟಿನ ಪರಿಸ್ಥಿತಿ ಉಂಟಾಗಿದೆ.

ಈ) ಹೌದು

ಉ) ಪ್ರಸ್ತಾವನೆ ಬಂದಾಗ ಸರ್ಕಾರ ಇದನ್ನು ಸೂಕ್ತವಾಗಿ ಪರಿಶೀಲಿಸಲಾಗುವುದು